ಕೃಷ್ಣಾ ಬೇಸಿನ್ ನೀರಾವರಿ ಯೋಜನೆಗಳನ್ನು ಕಾರ್ಯಗತಗೊಳಿಸುವ ಬಗ್ಗೆ

೬೬೬. ಜ್ಞಾನದೇವ ದೊಡ್ಡಮೇಟಿ (ರೋಣ).—ಮಾನ್ಯ ಲೋಕೋಪಯೋಗಿ, ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೃಷ್ಣಾ ಜಲಾನಯನ ಪ್ರದೇಶದಲ್ಲಿ ನೀರಾವರಿ ಯೋಜನೆಗಳನ್ನೂ ತೀವ್ರವಾಗಿ ಮುಂಗಿಸಲು ಸರಕಾರದವರು ಕೈಗೊಂಡ ಕ್ರಮಗಳೇನು ?

ಆ) ೧೯೮೬-೮೮ನೇ ಸಾಲಿನಲ್ಲಿ ವಿವಿಧ ನೀರಾವರಿ ಯೋಜನೆಗಳಿಗಾಗಿ ತೆಗೆದಿರಿಸಿದ ಆರ್ಥಿಕ ಅನುದಾನವೆಷ್ಟು ?

ಇ) ಮಲಪ್ರಭಾ ನೀರಾವರಿ ಯೋಜನೆ ಪೂರ್ಣವಾಗಿ ಮುಗಿಯಲು ಇನ್ನು ಎಷ್ಟು ಸಮಯ ಬೇಕಾಗುವುದು ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಕೃಷ್ಣಾ ಜಲಾನಯನ ಪ್ರದೇಶದಲ್ಲಿ ಮುಂದುವರೆಯುತ್ತಿರುವ ಯೋಜನೆಗಳನ್ನು ಜಾಗ್ರತೆ ಮುಗಿಸಲು ರಾಜ್ಯದ ಆರ್ಥಿಕ ಸಂಪನ್ಮೂಲಗಳನ್ನು ಸರಿಸಿ ಸಾಧ್ಯವಾದಷ್ಟು ಗರಿಷ್ಟ ಅನುದಾನವನ್ನು ಒದಗಿಸಲಾಗುತ್ತದೆ.

ಆ) ಕೃಷ್ಣಾ ನದಿಕೊಳ್ಳದ ಯೋಜನೆಗಳಿಗೆ ೧೯೮೬-೮೮ರ ಆಯವ್ಯಯದಲ್ಲಿ ಒಟ್ಟು ೧೫೫.೦೨ ಲಕ್ಷ ರೂ.ಗಳ ಅನುದಾನವನ್ನು ಮಾಡಲಾಗಿದೆ.

ಇ) ಮಲಪ್ರಭಾ ಯೋಜನೆಗೆ ಈಗಿನ ವಂಟ್ಟದಲ್ಲಿ ಸಾಧ್ಯವಾದ ಹಣದ ಹಂಚಿಕೆಯ ಪ್ರಕಾರ ಈ ಯೋಜನೆಯನ್ನು ಲೆನೇ ಯೋಜನೆಯ ಅವಧಿಯಲ್ಲಿ ಪೂರ್ಣಗೊಳಿಸಲು ಸಾಧ್ಯವಾಗುವುದು.

ಸರಕಾರಿ ಪಾಲಿಟೆಕ್ನಿಕ್‌ಗಳನ್ನು ಮುಂಜೂರು ಮಾಡುವ ಬಗ್ಗೆ

೬೬೭. **ಶ್ರೀ ಜ್ಞಾನದೇವ ದೊಡ್ಡಮೇಟಿ (ರೋಣ).**—ಮಾನ್ಯ ಶಿಕ್ಷಣಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ೧೯೮೫ನೇ ಸಾಲಿನಿಂದ ರಾಜ್ಯದಲ್ಲಿ ಸ್ಥಾಪಿಸಲಾದ ಸರಕಾರಿ/ಖಾಸಗಿ ಪಾಲಿಟೆಕ್ನಿಕ್‌ಗಳ ಸಂಖ್ಯೆ ಎಷ್ಟು? ಹಾಗೂ ಅವುಗಳು ಯಾವ ತಾಲ್ಲೂಕುಗಳಲ್ಲಿ ಪ್ರಾರಂಭಿಸಲಾಗಿದೆ ?

ಆ) ಧಾರವಾಡ ಜಿಲ್ಲೆ ರೋಣ ತಾಲ್ಲೂಕಿನಲ್ಲಿ ಸರಕಾರಿ ಪಾಲಿಟೆಕ್ನಿಕನ್ನು ಪ್ರಾರಂಭಿಸುವಂತೆ ಮನವಿ ಸಲ್ಲಿಸಿರುವುದು ಸರಕಾರದವರ ಗಮನಕ್ಕೆ ಬಂದಿದೆಯೆ ?

ಇ) ಹಾಗಿದ್ದಲ್ಲಿ ಸರ್ಕಾರಿ ಪಾಲಿಟೆಕ್ನಿಕ್ ಪ್ರಾರಂಭಿಸಲು ಸರ್ಕಾರದವರು ಕೈಗೊಂಡ ಪೂರ್ವ ಭಾವಿ ಕ್ರಮಗಳೇನು ?

ಶ್ರೀ ಡಿ. ವಂಜುನಾಥ್ (ಶಿಕ್ಷಣ ಸಚಿವರು).—

ಅ) ಒಟ್ಟು ಸಂಖ್ಯೆ ೧೦೫ ವಿವರಗಳಿಗೆ ತಾಲ್ಲೂಕುವಾರು ಪಟ್ಟಿಯನ್ನು ಲಗತ್ತಿಸಲಾಗಿದೆ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.